**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಡಿ ಜೆ ಆರ್ ವಕೀಲರಿಂದಃ 12 ನೇ ಪ್ರತಿವಾದಿ ಪರವಾಗಿಃ**

ನಾನು ಅಸಿಸ್ಟೆಂಟ್ ಅಗ್ರಿಕಲ್ಚರ್ ಆಫೀಸರ್ ಆಗಿದುದ 2008 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಿವೃತ್ತಿಯಾದ ನಂತರ ನಾನು ಈಗ ವ್ಯವಸಾಯ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನದು ನೀರಾವರಿ ಜಮೀನು ಒಣಬೇಸಾಯದ ಜಮೀನು ಎರಡು ಇರುತ್ತದೆ. ನೀರಾವರಿ ಜಮೀನಿನಲ್ಲಿ ತೆಂಗು ಅಡಿಕೆ ಸಪೋಟ ಹಾಕಿರುತ್ತೇನೆ ಎಂದರೆ ಸರಿ. ನಾನು ಒಂದವರೆಯಿಂದ ಎರಡು ಎಕರೆ ಜಮೀನಿನಲ್ಲಿ ಅಡಿಕೆ ಬೆಳೆದಿರುತ್ತೇನೆ. ಸಪೋಟ ಕೂಡಾ ಒಂದುವರೆ ಎಕರೆ ಜಮೀನಿನಲ್ಲಿ ಹಾಕಿರುತ್ತೇನೆ. ತೆಂಗು ಕೂಡಾ ಒಂದುವರೆ ಎಕರೆ



ಜಮೀನಿನಲ್ಲಿ ಹಾಕಿರುತ್ತೇನೆ. ನಾನು ತೆಂಗು ಅಡಿಕೆ ಸಪೋಟ ಬೆಳೆ ಬೆಳೆದಿದ್ದರಿಂದ ಸುತ್ತಲೂ ಬೇಲಿ ಹಾಕಿರುತ್ತೇನೆ ಎಂದರೆ ಸರಿ. ತೆಂಗು ಅಡಿಕೆ ಸಪೋಟ ನಾನೇ ಸ್ವಂತ ಬೆಳೆಸಿರುತ್ತೇನೆ ಎಂದರೆ ಸರಿ. ನಾನು ಒಬ್ಬನೇ ಬೆಳೆಸಿದ್ದರಿಂದ ನನ್ನ ಅಣ್ಣತಮ್ಮಂದಿರಿಗೆ ತೆಂಗು ಅಡಿಕೆ ಸಪೋಟದಲ್ಲಿ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ಸಪೋಟ ಬೆಳೆ

ನಾನು ಮಾರಾಟ ಮಾಡಿರುವುದಿಲ್ಲ. ತೆಂಗು ಅಡಿಕೆ ಸಪೋಟ ಬೆಳೆಯಿಂದ ಯಾವುದೇ ಆದಾಯ ಬಂದಿರುವುದಿಲ್ಲ. ತೆಂಗು ಅಡಿಕೆ ಸಪೋಟ ಬೆಳೆ ಬೆಳೆಯಲು 50-60 ಸಾವಿರ ರೂ. ಖರ್ಚು ಮಾಡಿರುತ್ತೇನೆ. ತಂತಿ ಬೇಲಿ ಹಾಕಲು 20-30 ಸಾವಿರ ರೂ. ಖರ್ಚಾಗಿರುತ್ತದೆ.

ಈ ಮೇಲೆ ಹೇಳಿದ ಫಸಲು ಬೆಳೆಯಲು ಕೆನರಾ ಬ್ಯಾಂಕಿನಲ್ಲಿ ಒಂದು ಲಕ್ಷ ರೂ. ಸಾಲ ಮಾಡಿರುತ್ತೇನೆ. ಬಿ. ಇ. ರಂಗಪ್ಪರೆಡ್ಡಿ ಎಂದರೆ ನಾನೇ. 2006-07 ನೇ ಸಾಲಿನಲ್ಲಿ ನಾನು ನನ್ನ ಜಮೀನನ್ನು ಆಧಾರವಾಗಿಟ್ಟು 6 ಲಕ್ಷ 60 ಸಾವಿರ ರೂ. ಬ್ಯಾಂದಕಿನಲ್ಲಿ ಸಾಲ ಮಾಡಿರುತ್ತೇನೆ ಎಂದರೆ ಸರಿ. ಬ್ಯಾಂಕಿನಲ್ಲಿ ಸಾಲಕ್ಕೆ ನಾನೊಬ್ಬನೇ ಆಧಾರ ಮಾಡಿರುತ್ತೇನೆ ಎಂದರೆ ಸರಿ. ಬ್ಯಾಂಕಿನಲ್ಲಿ ಸಾಲ ಮಾಡುವಾಗ ನನ್ನ ಹೆಸರಿಗೆ ಇರುವಂತಹ ದಾಖಲಾತಿಗಳನ್ನು ಕೊಟ್ಟು ಸಾಲ ಮಾಡಿರುತ್ತೇನೆ ಎಂದರೆ ಸರಿ. ಅದೇ ರೀತಿ ನಾನು ಬ್ಯಾಂಕಿನಲ್ಲಿ ಸಾಲ ಮಾಡಬೇಕಾದರೆ ಆಧಾರವಾಗಿ ಪಾಲು ವಿಭಾಗ ಪತ್ರ ಪಹಣಿ ಪತ್ರ ಮತ್ತು ಪಟ್ಟ ಪುಸ್ತಕ ಕೊಟ್ಟಿರುತ್ತೇನೆ. ಅದೇ ರೀತಿ ಬ್ಯಾಂಕಿನಲ್ಲಿ ಸಾಲ ಕೊಡಬೇಕಾದರೆ ನಾವು ಕೊಟ್ಟ ದಾಖಲೆಗಳನ್ನು ಲೀಗಲ್ ಅಡ್ವೈಸೈರ್ ಮೂಲಕ



ಪರಿಶೀಲಿಸಿ ಎಲ್ಲಾ ಸರಿಯಾಗಿದೆ ಎಂದು ಕಾನೂನು ಸಲಹೆಗಾರರು ವರದಿ ಕೊಟ್ಟ ಮೇಲೆ ಬ್ಯಾಂಕಿನವರು ಸಾಲ ಮಂಜೂರು ಮಾಡುತ್ತಾರೆ ಎಂದರೆ ಸರಿ. ಅದೇ ರೀತಿ ನಾನು ಬ್ಯಾಂಕಿನಲ್ಲಿ ಸಾಲ ತೆಗೆಯಬೇಕಾದರೆ ನಾನು ಅಧಾರವಾಗಿಟ್ಟ ಜಮೀನು ಮಾಲೀಕ ನಾನೊಬ್ಬನೇ ಎಂದು ಹೇಳಿ ಬ್ಯಾಂಕಿನಿಂದ ಸಾಲ ಪಡೆದಿರುತ್ತೇನೆ ಎಂದರೆ ಸರಿ. ನಾನು

ಸಾಲ ಪಡೆದ ನಂತರ ಬ್ಯಾಂಕಿಗೆ ಸಾಲ ಮರುಪಾವತಿ ಮಾಡಿರುವುದಿಲ್ಲ. ನನ್ನ ವೈಯಕ್ತಿಕ ಜೀವನದಲ್ಲಿ ಯಾವುದಾದರೂ ಆಸ್ತಿಗಳನ್ನು ನಾನು ಕ್ರಯಕ್ಕೆ ಪಡೆದಿರುವುದಿಲ್ಲ.

ಈ ಕೇಸಿನ 10ನೇ ಪ್ರತಿವಾದಿ ಕೃಷ್ಣಾರೆಡ್ಡಿ ನನಗೆ ಅಣ್ಣನಾಗಬೇಕು. ಕೃಷ್ಣಾರೆಡ್ಡಿಯವರಿಂದ ನಾನು 3 ಜಮೀನುಗಳನ್ನು ನೋಂದಣಿ ಕ್ರಯಪತ್ರದ ಮೂಲಕ ಬರೆಸಿಕೊಂಡಿರುತ್ತೇನೆ ಎಂದರೆ ಸರಿ. ಅದೇ ರೀತಿ ಕೃಷ್ಣಾರೆಡ್ಡಿಯವರಿಂದ ಕ್ರಯಕ್ಕೆ ಪಡೆದ ಮೂರು ಜಮೀನುಗಳು ನನ್ನ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿ ಇರುತ್ತವೆ ಎಂದರೆ ಸರಿ. ಕೃಷ್ಣಾರೆಡ್ಡಿಯವರು ಬರೆದುಕೊಟ್ಟ ಕ್ರಯ ಪತ್ರ ನನ್ನ ಸ್ವಾಧೀನಾನುಭವದಲ್ಲಿ ಇರುತ್ತದೆ ಎಂದರೆ ಸರಿ. ಕೃಷ್ಣಾರೆಡ್ಡಿ ಇವರು ನನಗೆ ಕ್ರಯ ಪತ್ರದ ಮೂಲಕ ಮೂರು ಜಮೀನುಗಳನ್ನು ಮಾರಾಟ ಮಾಡಿದ್ದು ಸದರಿ ಮೂರು ಜಮೀನುಗಳು ಕೃಷ್ಣಾರೆಡ್ಡಿಯವರಿಗೆ ಅವರ ತಾತಾನ ಆಸ್ತಿಯಾಗಿದ್ದು ಸದರಿ ಕೃಷ್ಣಾರೆಡ್ಡಿಯವರ ಅಣ್ಣತಮ್ಮಂದಿರು ಪಾಲು ಮಾಡಿಕೊಂಡಾಗ ಪಾಲು ವಿಭಾಗದಲ್ಲಿ ಕೃಷ್ಣಾರೆಡ್ಡಿಯವರಿಗೆ ಬಂದಿದ್ದು ಸದರಿ ಜಮೀನು ನನಗೆ ಮಾರಾಟ ಮಾಡಿದ್ದು ಇರುತ್ತದೆ. ಕೃಷ್ಣಾರೆಡ್ಡಿಯವರು ನನಗೆ ಮಾರಾಟ ಮಾಡಿದ ಮೂರು ಜಮೀನುಗಳ ಕ್ರಯ ಪತ್ರ ನ್ಯಾಯಾಲಯಕ್ಕೆ



ಹಾಜರುಪಡಿಸಲು ನನ್ನದು ಯಾವುದೇ ತೊಂದರೆ ಇರುವುದಿಲ್ಲ.

ಕೃಷ್ಣಾರೆಡ್ಡಿಯವರು ನನಗೆ ಮಾರಾಟ ಮಾಡಿದ ಮೂರು ಜಮೀನಿಂದ ಬಂದ ಹಣದಿಂದ ಅಂಜನರೆಡ್ಡಿಯವರಿಂದ 3 ಜಮೀನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ.48 ರಲ್ಲಿ ಒಂದು ಹಳೆ ಬಾವಿ ಇರುತ್ತದೆ ಎಂದರೆ ಸರಿ. ಸದರಿ ಬಾವಿ

ಕೃಷ್ಣಾರೆಡ್ಡಿಯವರ ಸ್ವಾಧೀನಾನುಭವದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಬಾವಿಯ ಜಮೀನನ್ನು ಕೃಷ್ಣಾರೆಡ್ಡಿಯವರು ಅಂಜಿನರೆಡ್ಡಿಯವರಿಂದ ಖರೀದಿಗೆ ತೆಗೆದು ಕೊಂಡಿರುತ್ತಾರೆ ಎಂದರೆ ಸರಿ. ಸದರಿ ಜಮೀನು ಕೂಡಾ ಅಂಜಿನರೆಡ್ಡಿಯರಿಗೆ ಅವರ ತಾತಾನ ಆಸ್ತಿಯಾಗಿದ್ದು, ಸದರಿ ಜಮೀನು ಅಂಜಿನರೆಡ್ಡಿಯವರ ಅಣ್ಣತಮ್ಮಂದಿರ ಪಾಲು ವಿಭಾಗದಲ್ಲಿ ಬಾವಿ ಇರುವ ಜಮೀನು ಅಂಜಿನರೆಡ್ಡಿಯವರಿಗೆ ಬಂದಿದ್ದು ಸದರಿಯವರು ತಮ್ಮ ಪಾಲಿನ ಜಮೀನನ್ನು ಕೃಷ್ಣಾರೆಡ್ಡಿಯವರಿಗೆ ನೋಂದಣಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

ಅಂಜಿನರೆಡ್ಡಿಯವರು ಬೋವಿಶಾಂತಮ್ಮ ಎನ್ನುವವರಿಂದ 8 ಎಕರೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಈಗ ಅಂಜಿನರೆಡ್ಡಿಯವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಅಂಜಿನರೆಡ್ಡಿಯವರು ತೀರಿಕೊಂಡ ನಂತರ ಅವರ ಮಕ್ಕಳಾದ 7 ಮತ್ತು 8 ನೇ ಪ್ರತಿವಾದಿಯರು ಸದರಿ ಜಮೀನಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ. ಬೋವಿಶಾಂತಮ್ಮನವರಿಂದ ಅಂಜಿನರೆಡ್ಡಿಯವರು ಖರೀದಿಸಿದ ಜಮೀನು ಅದು ಅವರ ಸ್ವಂತ ಜಮೀನಾಗಿರುತ್ತದೆ. ಸದರಿ ಜಮೀನಿನಲಿಲ ನನಗಾಗಲಿ ಉಳಿದ



ಪ್ರತಿವಾದಿಯರಿಗಾಗಲಿ ಹಕ್ಕು ಮಾಲೀಕತ್ವ ಮತ್ತು ಸ್ವಾಧೀನತೆ ಇರುವುದಿಲ್ಲ ಎಂದರೆ ಸರಿ. ಅಂಜಿನರೆಡ್ಡಿ ಇವರು ವ್ಯವಸಾಯಗಾರರಾಗಿದ್ದು ಸದರಿ ವ್ಯವಸಾಯ ಬಿಟ್ಟು ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ಅದೇ ರೀತಿ ಅಂಜಿನರೆಡ್ಡಿ ರವರು ತಮ್ಮ ಕುಟುಂಬದ ಪಾಲು ವಿಭಾಗದಲ್ಲಿ ಬಂದಂತಹ ಜಮೀನಿನ ಆದಾಯದಿಂದ ಬೋವಿ

ಶಾಂತಮ್ಮ ಇವರಿಂದ 8 ಎಕರೆ ಜಮೀನು ಖರೀದಿಸಿರುತ್ತಾರೆ ಎಂದರೆ ಸರಿ.

ನಾನು 1 ನೇ ವಾದಿಯ ಮಗಳನ್ನು ಮದುವೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ನನಗೂ ಮತ್ತು 1 ಮತ್ತು 2 ನೇ ವಾದಿಯರ ಮಧ್ಯೆ ಯಾವುದೇ ಬಿನ್ನಾಭಿಪ್ರಾಯ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ಈ ಕೇಸಿನಲ್ಲಿ ವಾದಿಯರು ಹಾಕಿದ ದಾವೆ ಸರಿ ಇರುತ್ತದೆ ಎಂದು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ವಾದಿ 1 ಮತ್ತು 2 ರವರಿಗೆ ಅಷ್ಟೊಂದು ಪ್ರಪಾಂಚಿಕ ವ್ಯವಹಾರ ಜ್ಞಾನ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನೇ ವಾದಿಯರಿಗೆ ಹೇಳಿಕೊಟ್ಟು ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ ಚಳ್ಳಕೆರೆ.